(ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಹೊಸ ಮ್ಯಾನೇಜ್‌ಮೆಂಟ್‌ನವರು ಈ ರಿಯಾಯಿತಿಗೆ ಒಪ್ಪದೇ ಹೋದರೆ ದಯವಿಟ್ಟು ಮ್ಯಾನೇಜ್‌ಮೆಂಟ್ ಅನ್ನು ಸರ್ಕಾರ ತೆಗೆದುಕೊಳ್ಳುವ ಕೆಲಸ ಸ್ವಲ್ಪ ಬೇಗ ಮಾಡಬೇಕು.

ಶ್ರೀ ಅರಗ ಜ್ಞಾನೇಂದ್ರ:- ಆಯಿಲ್ ಫಾರ್ಮ್ ಬೆಳೆದಿರತಕ್ಕಂಥ ರೈತರು ಹಾಳಾಗಿ ಹೋದರು. ಆ ಫಾಮಾಯಿಲ್ ಫ್ಯಾಕ್ಟರಿಯವರಿಗೆ ದುಡ್ಡು ಕೊಡಲಿಲ್ಲ. ಈ ರೀತಿ ಉತ್ತರ ಕೊಡುತ್ತಾರೆನ್ನುವ ಕಾರಣಕ್ಕಾಗಿ ಇಂಥವರೆಲ್ಲಾ ಶಿವಮೊಗ್ಗ ಜಿಲ್ಲೆಗೆ ಬರುತ್ತಿದ್ದೇವೆ.

(ಮಾನ್ಯ ಸದಸ್ಯರಾದ ಶ್ರೀ ಅರಗ ಜ್ಞಾನೇಂದ್ರ ಅವರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು:- ಮಾನ್ಯ ಮಾಮನಿಯವರ ವಿಚಾರ.

ಶ್ರೀ ಕಾಗೋಡು ತಿಮ್ಮಪ್ಪ:- ಕೆಲವು ವಿಚಾರ ಇಲ್ಲಿ ಮಾತನಾಡುವುದಕ್ಕೆ ಆಗದೇ ಇರಬಹುದು. ಮುಖ್ಯಸ್ಥರನ್ನು ಕರೆಸಿ ನಮ್ಮ ಅಭಿಪ್ರಾಯ ಏನು ಎಂದು ಹೇಳಬಹುದು.

ಅಧ್ಯಕ್ಷರು:- ಮುಖ್ಯಸ್ಥರನ್ನು ಕರೆಸುತ್ತೇನೆ.

(ಇ) ಉಪಾಧ್ಯಕ್ಷರಿಗೆ (ಬಾಳಾಸಾಹೇಬ್ ವಕ್ಕರ್) ಅವರ ಕುಟುಂಬದವರಿಗೆ ರಕ್ಷಣೆ.

+ಶ್ರೀ ಚಂದ್ರಶೇಖರ್ ಎಂ. ಮಾಮನಿ (ಮಾನ್ಯ ಉಪಾಧ್ಯಕ್ಷರು):- ಮಾನ್ಯ ಸಭಾಧ್ಯಕ್ಷರೆ, ನಾನು ಮುಖ್ಯಮಂತ್ರಿಗಳ ಹತ್ತಿರ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಜೀವನದ ಬಗ್ಗೆ ಸಂರಕ್ಷಣೆ ಕೊಡಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ. ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕು ನನ್ನ ಮತಕ್ಷೇತ್ರವಾಗಿದ್ದು, ಜನ ಕಲ್ಯಾಣದ ದೃಷ್ಟಿಯಿಂದ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ವ್ಯಾಪಕ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಕೈಗೊಂಡಿದ್ದು, ಇದರಲ್ಲಿ ಹಲವಾರು ಕಾಮಗಾರಿಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿರುತ್ತದೆ. ಇದರಿಂದಾಗಿ ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳಿಗೆ ಅನಾನುಕೂಲವಾಗಿದ್ದು, ಈ ಬಗ್ಗೆ ನನ್ನ ಮೇಲೆ ಪ್ರತೀಕಾರದ ಮನೋಭಾವವನ್ನು ತಳೆದಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಇದಕ್ಕೆ ಪುಷ್ಟಿ ನೀಡುವಂತೆ ಕಳೆದ ಹದಿನೈದು ದಿನಗಳಿಂದ ನನ್ನ ಸ್ವಕ್ಷೇತ್ರ ಸವದತ್ತಿಯಲ್ಲಿರುವ ಮನೆಗೆ ನನ್ನ ದೂರವಾಣಿ ಸಂಖ್ಯೆ: 2370 ಹಾಗೂ 2598 ಇದಕ್ಕೆ ಪ್ರಾತಃ ಕಾಲದಲ್ಲಿ ಅನೇಕ ಅನಾಮಧೇಯ ದೂರವಾಣಿ ಕರೆಗಳು ಬರುತ್ತಿದ್ದು, ನನಗೆ ಹಾಗೂ ನನ್ನ ಕುಟುಂಬದ ಸದಸ್ಯರಿಗೆ ಪ್ರಾಣ ಬೆದರಿಕೆಯನ್ನು ಒಡ್ಡಿರುತ್ತಾರೆ. ಇದಲ್ಲದೆ ಕಳೆದ ಶನಿವಾರ, ದಿನಾಂಕ 14.3.98 ರಂದು ಮುಂಜಾನೆ 05.30 ಗಂಟೆಗೆ ಎಂದಿನಂತೆ ನಾನು ಮುಂಜಾನೆ ವಾಕಿಂಗ್‌ಗೆ ತೆರಳಿದ್ದ ಸಂದರ್ಭದಲ್ಲಿ ಒಂದು ಅನಾಮಧೇಯ ವಾಹನವು ಹಿಂದಿನಿಂದ ಹೆಚ್ಚು ಕಡಿಮೆ ನನಗೆ ಅಪಘಾತವನ್ನುಂಟು ಮಾಡುವ ರೀತಿಯಲ್ಲಿ ಹಾಯ್ದು ಹೋಗಿರುತ್ತದೆ. ಈ ಘಟನೆಯಿಂದ ಮಾನಸಿಕವಾಗಿ ಜರ್ಜಿತವಾದ ನನಗೆ

ವಾಹನದ ನೋಂದಣಿ ಸಂಖ್ಯೆಯನ್ನು ಗಮನಿಸಲು ಸಾಧ್ಯವಾಗಿರುವುದಿಲ್ಲ. ಈ ಪಟ್ಟಭದ್ರ ಹಿತಾಸಕ್ತಿಗಳು ನನ್ನ ರಾಜಕೀಯ ಏಳಿಗೆಯನ್ನು ಸಹಿಸಲಸಾಧ್ಯವಾಗಿರುವುದರಿಂದ ಹಾಗೂ ನಾನು ಕೈಗೊಂಡ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ಅವರ ಹಲವಾರು ಅನೈತಿಕ ಕಾರ್ಯಗಳಿಗೆ ಮಂಗಳ ಹಾಡಬೇಕಾಗಿರುವುದರಿಂದ, ನನ್ನ ಹಾಗೂ ಕುಟುಂಬ ಸದಸ್ಯರ ಮೇಲೆ ಪ್ರತೀಕಾರ ಮನೋಭಾವವನ್ನು ತಾಳಿದ್ದಾರೆ. ಹೀಗಾದಲ್ಲಿ ಜನ ಪ್ರತಿನಿಧಿಗಳಿಗೆ ಜನ ಹಿತಾಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಅವಕಾಶದಿಂದ ವಂಚಿತರಾಗಿ ರಾಜ್ಯದ ಅಭಿವೃದ್ಧಿ ಕುಂಠಿತವಾಗುವುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನಲ್ಲಿ ನನಗೆ ಹಾಗೂ ನನ್ನ ಕುಟುಂಬದ ಸದಸ್ಯರಿಗೆ ಸೂಕ್ತ ರಕ್ಷಣೆಯನ್ನು ನೀಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ವಿನಂತಿಸುತ್ತೇನೆ. ಹಾಗೂ ಜನ ಪ್ರತಿನಿಧಿಗಳ ಕಾರ್ಯವನ್ನು ಸಾಂಗವಾಗಿ ನೆರವೇರಿಸುವಂತಾಗಲು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಿಸಿದವರಿಗೆ ಆದೇಶಿಸಬೇಕಾಗಿ ಸಹ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಕಳೆದ ಅಧಿವೇಶನ ಸೇರುವುದಕ್ಕೆ ಮೊದಲೇ ನನಗೆ ಈ ಫೋನುಗಳು ಬಂದಾಗ ನಾನು ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗೆ ಈ ತರಹ ದೂರವಾಣಿ ಕರೆಗಳು ಬರುತ್ತವೆ, ಮತ್ತು ನೀವು ಅದರ ಬಗ್ಗೆ ವಿಚಾರ ಮಾಡಿ ಎಂದು ತಿಳಿಸಿದಾಗ ಅವರೂ ಕೂಡ ಬೆಳಿಗ್ಗೆ 5 ರಿಂದ 6 ಗಂಟೆಯವರೆಗೆ ಬುಲೆಟ್ ಗಾಡಿಯ ಪೋಲೀಸರನ್ನು ಮನೆ ಮುಂದೆ ನಿಲ್ಲಿಸಿದರು. ಪಿ.ಸಿ. ಗಳನ್ನು ಓಡಾಡಿಸುವಂತಹ ಕಾರ್ಯಕ್ರಮಗಳನ್ನು ಇಟ್ಟುಕೊಂಡರು. ಆ ನಂತರ ಅಸೆಂಬ್ಲಿ ಚಾಲೂ ಆದ ನಂತರ ನಾನು ಇಲ್ಲಿಗೆ ಬಂದೆ. 14ನೆಯ ತಾರೀಖಿನ ದಿವಸ ನಾನು ಅಲ್ಲಿಗೆ ಹೋದೆ. ನಾನಂತೂ ಯಾರಿಗೂ ಕೆಟ್ಟದ್ದು ಮಾಡಿಲ್ಲ. ನನ್ನ ಮೇಲೆ ಈ ರೀತಿ ಕ್ರಮ ಏಕೆ ಬರುತ್ತದೆ ಎಂದು ತಿಳಿದು ನಾನು ವಾಕಿಂಗ್ ಹೋಗೋಣ ಎಂದು ಧೈರ್ಯ ಮಾಡಿ ಹೋದಾಗ ಹಿಂದಿನಿಂದ ಗಾಡಿ ಬಂದು ನನಗೆ ಆಘಾತ ಮಾಡುವಂತಹ ಒಂದು ಕೆಲಸವನ್ನು ಮಾಡಿದರು.

ಶ್ರೀ ಜೆ.ಎಚ್. ಪಟೇಲ್:- ನಿಮಗೆ ಹಾಗೂ ನಿಮ್ಮ ಕುಟುಂಬಕ್ಕೆ ಆಘಾತ ಆಗುವಂತಹ ಸಂದರ್ಭ ಅಥವಾ ಅವಕಾಶ ಇದ್ದರೆ, ಈ ಬಗ್ಗೆ ನಿಮಗೆ ಯಾರ ಮೇಲಾದರೂ ಗುಮಾನಿ ಇದೆಯಾ? ಪಟ್ಟಭದ್ರ ಹಿತಾಸಕ್ತಿಗಳ ವಿಚಾರ ಹೇಳಿದಿರಿ.

ಶ್ರೀ ಚಂದ್ರಶೇಖರ ಎಂ. ಮಾಮನಿ:- ನಾನಂತೂ ಸ್ಪಷ್ಟವಾಗಿ ಹೇಳುತ್ತೇನೆ. ನಾನು ಯಾರಿಗೂ ಅನ್ಯಾಯ ಮಾಡಿಲ್ಲ, ಯಾರಿಗೂ ಕೆಟ್ಟದ್ದು ಮಾಡಿಲ್ಲ.

ಶ್ರೀ ಜೆ.ಎಚ್. ಪಟೇಲ್:- ಅದು ನನಗೆ ಗೊತ್ತಿದೆ. ಅವರು ನನಗೆ ನೇರವಾಗಿ ಹೇಳಿದ್ದರೆ ಬೇಕಾದರೆ ಅವರ ಮನೆಯ ಸುತ್ತ 24 ಗಂಟೆ ಪಹರೆ ಇರುವ ಹಾಗೆ ಮಾಡುತ್ತಿದ್ದೆ. There are possibilities. ಈ ದೇಶದಲ್ಲಿ ಬಹಳ ರೀತಿಯಲ್ಲಿ ಹಿಂಸೆ ಸ್ಪೈಡ್ ಆಗುತ್ತಿದೆ. ಪೊಲಿಟಿಕಲ್ ರೈವಲ್ರಿನಾ ಅಥವಾ ಪ್ರಾಪರ್ಟಿ ಬೇಸ್ಡಾ? My request to you is, let us not discuss this here. We will try to find out these elements which are responsible for causing him embarrassment. ಅವರು ಏನು ಕೇಳುತ್ತಾರೋ ಅದನ್ನು ಸರ್ಕಾರ ಕೊಡುತ್ತದೆ. ಅವರಿಗೆ ಎಲ್ಲಾ ರೀತಿಯಿಂದ ರಕ್ಷಣೆ ಕೊಡುತ್ತೇವೆ.

MR. SPEAKER:- He did meet me this morning.

ಶ್ರೀ ಜೆ.ಹೆಚ್. ಪಟೇಲ್:- ನಾನು ಬೇಕಾದರೆ ಪೋಲೀಸ್ ರಿಪೋರ್ಟ್ ತರಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಈ ಸದನದ ಉಪಾಧ್ಯಕ್ಷರಾಗಿ ಅವರು ಆ ಮಾತನ್ನು ಹೇಳಿರುವಾಗ ಅದು ಬಹಳ ಅತ್ಯಂತ ಗಂಭೀರವಾದಂತಹ ಪರಿಸ್ಥಿತಿ. ಈ ಬಗ್ಗೆ ಸರ್ಕಾರ ಸಮಗ್ರವಾಗಿ ತನಿಖೆಯನ್ನೂ ಮಾಡಬೇಕು. ಅವರಿಗೆ ಎಲ್ಲಾ ರೀತಿಯ ರಕ್ಷಣೆಯನ್ನೂ ಕೊಡಬೇಕು. ಏಕೆಂದರೆ ಅವರು ಹೇಳಿದ್ದರಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಯಾರು ಎನ್ನುವುದನ್ನು ತಾವು ಕಂಡು ಹಿಡಿಯಬೇಕಾಗುತ್ತದೆ. ಏಕೆಂದರೆ ಇದು ಬಹಳ ಲಘುವಾಗಿ ತೆಗೆದುಕೊಳ್ಳುವುದಿಲ್ಲ. ವಾಹನ ಹೋಗುವಾಗ ನನ್ನ ಹಿಂದೆ ಬಂತು, ಎಂದು ಅವರು ಹೇಳಿದ್ದಾರೆ. ಪ್ರಾಣಕ್ಕೆ ಅಪಾಯ ಇರುವಾಗ ಈ ಬಗ್ಗೆ ಸರ್ಕಾರ ತೀವ್ರವಾದ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಾಳಾಸಾಹೇಬ್ ವಡ್ಡರ್ (ಚಿಕ್ಕೋಡಿ):- ಸನ್ಮಾನ್ಯ ಅಧ್ಯಕ್ಷರೆ, ನನಗೂ ಸಹ ಇದೇ ತಿಂಗಳು ದಿನಾಂಕ 12ನೇ ತಾರೀಖು ಇದೇ ರೀತಿ ಬೆದರಿಕೆಯ ದೂರವಾಣಿ ಕರೆಗಳು ಬಂದವು.

ಅಧ್ಯಕ್ಷರು:- ನೀವೂ ಸಹ ನನ್ನ ಬೇಟಿಯಾಗಿ ಅರ್ಜಿ ಕೊಟ್ಟಿದ್ದೀರಿ, ಕೆಲವರು ನನಗೆ ಟೆಲಿಫೋನ್ ಕಾಲ್ಸ್ ಮಾಡುತ್ತಾರೆ, ಮತ್ತೆ ಈ ರೀತಿಯೆಲ್ಲಾ ಆಗುತ್ತಿದೆ ಎಂದು ಹೇಳಿದಿರಿ, ಅದಕ್ಕೆ ನಾನು ಡಿ.ಐ.ಜಿ. ಅವರ ಹತ್ತಿರ ಮಾತನಾಡುತ್ತೇನೆ ಎಂದು ಹೇಳಿದೆ, ಲೋಕಲ್ ಎಸ್.ಪಿ. ಅವರ ಹತ್ತಿರ ಸಹ ಮಾತನಾಡುತ್ತೇನೆ ಎಂದು ಹೇಳಿದ್ದೆ. ಬೆಳಿಗ್ಗೆ ನಾನು I have requested the Deputy Speaker also in this matter.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಬಹುಶಃ ನಿಮ್ಮ ಪಾರ್ಟಿಯಲ್ಲೇ ಮಾತನಾಡಿ ಕೊಂಡಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ ನಾವು ಇದರ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ, ಉಪಾಧ್ಯಕ್ಷರಿಗೆ, ಸದನದ ಸದಸ್ಯರ ಹಕ್ಕನ್ನು ರಕ್ಷಣೆ ಮಾಡತಕ್ಕಂತಹ ಶಕ್ತಿ ಇರುವವರಿಗೆ ಈ ರೀತಿಯ ಪರಿಸ್ಥಿತಿ ಇದ್ದ ಮೇಲೆ, ಬೇರೆ ಸದಸ್ಯರ ಪರಿಸ್ಥಿತಿ ಹೇಗೆ? ಏಕೆಂದರೆ ಸನ್ಮಾನ್ಯ ಶ್ರೀ ವಡ್ಡರ್ ಅವರು ಈ ರೀತಿ ಹೇಳುತ್ತಿದ್ದಾರೆ, ಇದು ಯಾವ ಕಾರಣಕ್ಕಾಗಿ ಈ ರೀತಿ ಆಗುತ್ತಿದೆ? ಇದೇನಾದರೂ ಪಕ್ಷದ ಒಳ ಜಗಳದಿಂದ ಈ ರೀತಿ ಆಗುತ್ತಿದೆಯೇ, ಅಥವಾ ಏನಾದರೂ ಪ್ರಾಪರ್ಟಿ ಜಗಳದಿಂದ ಈ ರೀತಿ ಆಗುತ್ತಿದೆಯೇ ಅಥವಾ ಬೇರೆ ಯಾವುದಾದರು ರೀತಿಯಿಂದ ಇವತ್ತು ಈ ಸಮಸ್ಯೆ ಬರುತ್ತಾ ಇದೆಯೇ ಎಂಬ ಪ್ರಶ್ನೆ. ಏಕೆಂದರೆ, ಬರೀ ಅಭಿವೃದ್ಧಿ ಕೆಲಸ ಮಾಡುವವರಿಗೆ ಈ ರೀತಿ ತೊಂದರೆ ಇರುವಾಗ ನಾವು ಎಷ್ಟೋ ಸಲ ಮಂತ್ರಿಗಳ ವಿರುದ್ಧ ದೂರು ಮಾಡುತ್ತೇವೆ, ಎಷ್ಟೋ ಸಲ ನಿಮ್ಮಲ್ಲಿ ಆಗತಕ್ಕಂತಹ ಲೋಪದೋಷಗಳನ್ನು ಎತ್ತಿ ಹಿಡಿಯುತ್ತೇವೆ, ಅಥವಾ ಬೇರೆ ಜನರ ಮೇಲೆ ಆಗತಕ್ಕಂತಹ ಅನ್ಯಾಯದ ಮೇಲೆ ಪ್ರಸ್ತಾಪ ಮಾಡುತ್ತೇವೆ.

SRI J.H. PATEL: Are you willing to discuss this matter?

SRI M. MALLIKARJUNA KHARGE:- This is a serious matter. When the Deputy Speaker himself says that he has no protection...

ಶ್ರೀ ಜೆ.ಹೆಚ್. ಪಟೇಲ್:- ಅವರು ಹೇಳಿದ್ದಾರೆ, ಪ್ಲೀಸ್

ಶ್ರೀ ಚಂದ್ರಶೇಖರ್ ಎಂ. ಮಾಮನಿ:- ನೋ ಪ್ರೊಟೆಕ್ಷನ್ ಎಂದು ನಾನು ಹೇಳಲಿಲ್ಲ, ಪ್ರೊಟೆಕ್ಷನ್ ಕೊಡಬೇಕು ಎಂದು ನಾನು ಹೇಳುತ್ತಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ರಕ್ಷಣೆ ಕೊಡಿ ಎಂಬುದರಲ್ಲಿ ಅರ್ಥ ಇಲ್ಲ. ರಕ್ಷಣೆ ಇಲ್ಲ ಎಂದು ಅರ್ಥ.

ಶ್ರೀ ವಾಟಾಳ್ ನಾಗರಾಜ್:- ಈ ವಿಷಯ ಸದನದ ವಸ್ತು ಆಗುತ್ತದೆ. ಅವರು ಹೇಳದೇ ಇದ್ದರೆ ಚರ್ಚೆಗೆ ಬರುತ್ತಿರಲಿಲ್ಲ.

ಶ್ರೀ ಜೆ.ಹೆಚ್. ಪಟೇಲ್:- ಈ ಚರ್ಚೆ ಅನಾವಶ್ಯಕ, ಅವರು ಏನು ಕೇಳುತ್ತಾರೋ, ಎಲ್ಲಾ ರೀತಿಯಿಂದ, ಅವರು ಯಾವ ರೀತಿ ಹೇಳುತ್ತಾರೋ ಆ ರೀತಿ ಅವರಿಗೆ ಸರ್ಕಾರ ರಕ್ಷಣೆ ಕೊಡುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಈ ವಿಷಯ ಸದನದ ವಸ್ತು ಆಗಿರುವುದರಿಂದ ಮತ್ತು ಅವರು ಹೇಳಿರುವುದರಿಂದ ಚರ್ಚೆ ಆಗಬೇಕು. ಹೇಳದೆ ಅವರು ಗೋಪ್ಯವಾಗಿ ಇಟ್ಟಿದ್ದರೆ ಯಾರೂ ಮಾತನಾಡುತ್ತಿರಲಿಲ್ಲ. ಆದುದರಿಂದ ಇದು ಗಂಭೀರವಾದ ಪರಿಸ್ಥಿತಿ ಅಷ್ಟೇ. ಬೇರೆ ಪ್ರಶ್ನೆ ಇಲ್ಲ. ಹಿಂದೆ ರಷ್ಮಿ ಅವರಿಗೂ ಯಾರೂ ರಕ್ಷಣೆ ಕೊಡಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್:- ರಕ್ಷಣೆ ಬೇಕು ಎಂದು ಮಾತನಾಡುವಾಗ ಎಲ್.ಹೆಚ್.ನಲ್ಲಿ ಕೆಲಸ ಮಾಡುವಂತಹ ಡ್ರೈವರ್‌ಗಳನ್ನು ನಮ್ಮ ಮೇಲೆ ನಿಯಂತ್ರಣ ಇಲ್ಲದೆ ಹೊಡೆದು ಹಾಕಿದರು. ಈ ರೀತಿ ಮಾಡುವುದಾದರೆ ಹೇಗೆ?

ಅಧ್ಯಕ್ಷರು:- ಸನ್ಮಾನ್ಯ ಎಂ.ಪಿ. ಪ್ರಕಾಶ್ ಅವರೇ, ನಾನು ನಿಮಗೆ ಒಂದು ವಿಷಯ ಹೇಳುತ್ತೇನೆ. ಎಲ್.ಹೆಚ್.ನಲ್ಲಿ ಶಿಸ್ತು ಮೂಡಿಸಬೇಕು ಎಂದು ರಾತ್ರಿ 12 ಗಂಟೆಗೆ 1 ಗಂಟೆಗೆ ನಾನೇ ಡ್ರೈವ್ ಮಾಡಿಕೊಂಡು ಹೋಗಿದ್ದೇನೆ, ಗಲಾಟೆ ಮಾಡುತ್ತಾರೆ ಎಂದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ರಾಜಕೀಯ ದುರುದ್ದೇಶದಿಂದ ಕೂಡಿದೆ ಎಂದು ಸ್ವತಃ ಉಪಾಧ್ಯಕ್ಷರೇ ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್:- ಈಗ ನಾವು ರಾಜಕೀಯ ಮಾಡಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಹೇಳಿದ್ದಾರೆ ಕೇಳಿ. ಅವರು ಹೇಳಿದರು ಇದು ರಾಜಕೀಯ, ನಾನು ಅಭಿವೃದ್ಧಿ ಕೆಲಸ ಮಾಡುವುದನ್ನು ಕೆಲವು ಜನ ಸಹಿಸದೆ ಇರತಕ್ಕಂತವರು ಇದ್ದಾರೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದರು. ಇದು ಪ್ರಾಪರ್ಟಿಗಳ ಜಗಳ ಅಲ್ಲ ಎಂಬ ಮಾತನ್ನೂ ಸಹ ಹೇಳಿದರು.

ಶ್ರೀ ಬಾಳಾಸಾಹೇಬ್ ವಡ್ಡರ್ (ಚಿಕ್ಕೋಡಿ):- ನನ್ನ ಕ್ಷೇತ್ರದಲ್ಲಿ ನನಗೂ ಸಹ ಪುನೀತ್ ಎಂಬ ಹೋಟೆಲಿನಲ್ಲಿ ದಿನಾಂಕ 12 ರಂದು ರಾತ್ರಿ 12 ಗಂಟೆಗೆ ಅನೀಲ್ ಸೋದಲಿಗೆ ಎಂಬುವವರು, ಫೋನ್ ಮುಖಾಂತರ ಹತ್ತು ನಿಮಿಷ ಮಾತನಾಡಿ, ಸುಮಾರು ಎರಡು ಗಂಟೆಗಳ ಕಾಲ ನನಗೆ ತೊಂದರೆ ಕೊಟ್ಟರು. ಬಾಯಿಗೆ ಬಂದ ಹಾಗೆ ಶಬ್ದಗಳನ್ನು ಉಪಯೋಗಿಸಿದರು. ಆ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ಎಲ್.ಹೆಚ್.ನಲ್ಲಿ ಇದ್ದೆ. ಅಲ್ಲದೆ ನಮ್ಮ ಜಾತಿಯನ್ನು ಬೈದರು. ಕೊನೆಗೆ ನಿನ್ನ ದಾರಿ ಕಾಯುತ್ತಿದ್ದೇನೆ, ನೀನು ಬಾ ನಿನಗೆ ಒಂದು ಕೈ ನೋಡಿಕೊಳ್ಳುತ್ತೇನೆ ಎಂದು ಹೇಳಿದರು. ಆದಕಾರಣ ನಾನು ಊರಿನ ಕಡೆ ಹೋಗಿಲ್ಲ. ನನಗೆ ಯಾರು ತೊಂದರೆ ಕೊಟ್ಟರು, ಯಾವ ರೀತಿ ಬೈದರು ಎಂಬ ವಿಷಯವನ್ನು ತಮಗೆ ಪತ್ರದಲ್ಲಿ ಬರೆದು, ತಮ್ಮ ಕೊಠಡಿಗೆ ಬಂದು ತಮ್ಮ ಹತ್ತಿರ ಮನವಿ ಮಾಡಿಕೊಂಡಿರುವುದು ಇದೆ. ತಾವು ಡಿಐಜಿ ಗೆ ಹೇಳಿದ್ದೀರಿ ಎಂದು ನನಗೂ ತಿಳಿದು ಬಂದಿದೆ. ಆದರೆ ಆ ಪೋಲೀಸ್ ಅಧಿಕಾರಿ ಅದರ ಬಗ್ಗೆ ಯಾವುದೇ ರೀತಿಯಾದಂತಹ ಕ್ರಮವನ್ನು ಕೈಗೊಂಡಿಲ್ಲ. ನಾನು ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಒಂದು ವಿಷಯವನ್ನು ತಿಳಿಸಿದ್ದೆ. ಅದೇನೆಂದರೆ, ಒಂದು ಹೋಟೆಲ್‌ನಲ್ಲಿ ಲೈಸೆನ್ಸ್ ಇಲ್ಲದೆ ಅರ್ಕಾಕ್ ಸಪ್ಲೈ ಮಾಡುವುದು, ನಂತರ ಜಿಲ್ಲಾಧಿಕಾರಿಗಳ ನಿಷೇದಾಜ್ಞೆ ಇದ್ದರೂ ಕೂಡ ರಾತ್ರಿ ಸಮಯದಲ್ಲಿ ಮದ್ಯಪಾನವನ್ನು ಸರಬರಾಜು ಮಾಡಿ, ಕುಡಿಯುವಂತರಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ, ಇದು ಸರಿ ಅಲ್ಲ, ಇವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೆ. ಅದಕ್ಕೆ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಫೋನ್ ಮಾಡಿ ಅಧಿಕಾರಿಗಳ ಮೇಲೆ ಒತ್ತಾಯ ತರುತ್ತಿದ್ದಾರೆ, ಆ ರೀತಿ ಮಾಡಬೇಡಿ, ಅವರಿಗೆ ತೊಂದರೆ ಕೊಡಬೇಡಿ ಎಂದು ಹೇಳಿದ್ದಾರೆ ಎಂದು ತಿಳಿದು ಬಂದಿದೆ. ಈ ರೀತಿ ಆಗಿರುವುದರಿಂದ ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಅದೂ ಅಲ್ಲದೆ ನನ್ನ ಜಾತಿ ಹಿಡಿದು ಬೈಯುತ್ತಿದ್ದಾನೆ. ಏಕೆಂದರೆ ನಾನು ಪರಿಶಿಷ್ಟ ಜಾತಿ ವರ್ಗದವನಾಗಿರುವುದರಿಂದ ನನ್ನ ಮನಸ್ಸಿಗೆ ಬಹಳ ನೋವಾಗಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ರೂಲಿಂಗ್ ಪಾರ್ಟಿಯಲ್ಲಿ ಇರುವಂತಹ ನಿಮಗೆ ರಕ್ಷಣೆ ಕೊಡಲು ಸರ್ಕಾರಕ್ಕೆ ಆಗಲಿಲ್ಲ ಅಂದ ಮೇಲೆ ಬೇರೆಯವರ ಸ್ಥಿತಿ ಏನು?

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ:- ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದಂತಹ ಶ್ರೀ ಬಾಳಾ ಸಾಹೇಬ್ ವಡ್ಡರ್ ಅವರು ಇದುವರೆವಿಗೂ ಅವರಿಗೆ ಆದ ತೊಂದರೆಯನ್ನು ನಮ್ಮ ಹತ್ತಿರ ಪ್ರಸ್ತಾಪ ಮಾಡಿಲ್ಲ, ಇದು ಮೊದಲನೆಯದು. ಎರಡನೆಯದು ಯಾರ್ಯಾರು ಜಗಳ ಮಾಡಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ಆದರೆ ಹೋಟೆಲ್ ಮಾಲೀಕ ನನ್ನ ಹತ್ತಿರ ಬಂದಿದ್ದ

ನಿಜ. ಅವನು ಹೇಳಿದ, ಸಾರ್, ನಮ್ಮ ಹೋಟೆಲ್ ಲೈಸೆನ್ಸ್ ರದ್ದು ಮಾಡುತ್ತಿದ್ದಾರೆ, ನೀವು ಸ್ವಲ್ಪ ಫೋನ್ ಮಾಡಿ ಹೇಳಿ ಎಂದು ಹೇಳಿದ. ಅದಕ್ಕೆ ನಾನು ಯಾವ ಕಾರಣಕ್ಕಾಗಿ ಲೈಸೆನ್ಸ್ ರದ್ದು ಮಾಡುತ್ತಿದ್ದಾರೆ ಎಂದು ಕೇಳಿದ್ದಕ್ಕೆ, ನಮ್ಮಲ್ಲಿ ಯಾರೋ ಜಗಳ ಮಾಡುತ್ತಿದ್ದಾರೆ ಎಂದು ಹೇಳಿದ. ಇವರ ಹೆಸರನ್ನು ಹೇಳಲಿಲ್ಲ ಅವರ ಹೆಸರನ್ನು ಹೇಳಲಿಲ್ಲ, ಅಲ್ಲದೆ ಈ ಘಟನೆ ಆಗಿರುವುದು ನನ್ನ ಗಮನಕ್ಕೆ ಬಂದಿಲ್ಲ. ಆಗ ನಾನು ಆಫೀಸರ್‌ಗೆ ಹೇಳಿದೆ, ಏಕೆ, ಬಡವನ ಹೋಟೆಲ್‌ನ್ನು ಬಂದ್ ಮಾಡುತ್ತೀರಾ ಎಂದು ಕೇಳಿದ್ದು ನಿಜ. ಆದರೆ ಇದರ ಹಿನ್ನಲೆ ಕೂಡ ನನಗೆ ಗೊತ್ತಿಲ್ಲ. ಸನ್ಮಾನ್ಯ ಬಾಳಾ ಸಾಹೇಬ್ ವಡ್ಡರ್ ಅವರೂ ಸಹ ನನಗೆ ಹೇಳಲಿಲ್ಲ. ಮತ್ತೆ ಯಾರು ಮಾಡಿದ್ದರು ಎಂಬುದನ್ನು ಅವರೂ ಸಹ ಹೇಳಲಿಲ್ಲ. ಪೋಲೀಸ್ ಆಫೀಸರ್ ಜೊತೆ ಮಾತನಾಡಿದಾಗ ಅವರೂ ಸಹ ಈ ವಿಷಯವನ್ನು ಹೇಳಲಿಲ್ಲ. ಸರ್, ಅದು ಆಗಲೇ ಸಸ್ಪೆಂಡ್ ಆಗಿದೆ, ಅದನ್ನು ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಹೋಟೆಲ್ ಮಾಲೀಕ ಬಂದು ಹೇಳಿದ ಮೇಲೆ ನಾನು ಫೋನ್ ಮಾಡಿದ್ದು ನಿಜ. ಆದರೆ ಅದರ ಹಿನ್ನಲೆ ನನಗೆ ತಿಳಿದಿಲ್ಲ ಎಂಬ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ಒಬ್ಬ ಸದಸ್ಯರೇ ಮಂತ್ರಿಗಳ ಮೇಲೆ ನೇರವಾಗಿ ಈ ರೀತಿ ಚಾರ್ಜ್ ಮಾಡಿದ ಮೇಲೆ ನೀವು ಲಘುವಾಗಿ ತೆಗೆದುಕೊಳ್ಳಿ ಇದಕ್ಕೆ ಸಂಬಂಧ ಇಲ್ಲ ಅಂದರೆ ಹೇಗೆ?

ಅಧ್ಯಕ್ಷರು:- ಇನ್ನು ಏನೇನೆಲ್ಲಾ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮ್ಮ ಉಪಾಧ್ಯಕ್ಷರು ವಿಸ್ತಾರವಾಗಿ ಹೇಳುವುದಕ್ಕೆ ಹೆದರಿದರು. ಆದರೆ ಅವರು ಸಂಕ್ಷಿಪ್ತವಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕು ಎಂದು ತಮ್ಮ ಭಾಷೆಯಲ್ಲಿ ಹೇಳಿದರು.

ಅಧ್ಯಕ್ಷರು:- ಪ್ರಜಾಪ್ರಭುತ್ವದಲ್ಲಿ ಈ ರೀತಿ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಆಗಿರುವುದಿಲ್ಲ, ಈ ರೀತಿ ನಡೆದಿದೆ.

ಅಧ್ಯಕ್ಷರು:- ನಾನು ಯಾವಾಗಲೋ ಒಂದು ಸಲ ಪೇಪರಿನಲ್ಲಿ ಓದಿದ ನೆನಪು, ಪಾರ್ಟಿ ಮೀಟಿಂಗ್‌ನಲ್ಲಿ ಮುಖ್ಯಮಂತ್ರಿಗಳು ಬಚ್ಚಿಟ್ಟುಕೊಂಡರು ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಏನಾಗಿದೆ ಎಂದರೆ, ಪಕ್ಷದಲ್ಲಿ ಒಡಕು ಉಂಟಾದಾಗ ನಮ್ಮ ಕಡೆ ಬರಬೇಕೋ, ನಿಮ್ಮ ಕಡೆ ಬರಬೇಕೋ ಎಂಬ ಗುದ್ದಾಟದಲ್ಲಿ ಈ ರೀತಿ ಜಗಳಗಳು ನಡೆದಿದೆ. ಈ ಜಗಳ ಪ್ರಾರಂಭವಾಗಿದ್ದೆ ಜನತಾ ದಳ ಒಡಕಾಗಿ ಲೋಕಶಕ್ತಿ ಆದ ಮೇಲೆ. ಕೆಲವು ಮೆಂಬರ್ಸ್‌ನ ಇವರು ತೆಗೆದುಕೊಳ್ಳಬೇಕು, ಕೆಲವು ಮೆಂಬರ್ಸ್‌ನ ರೀಟೈನ್ ಮಾಡಬೇಕು ಎಂಬ ಒಳಜಗಳದಲ್ಲಿ ಶಾಸಕರನ್ನು ಹೆದರಿಸುತ್ತಿದ್ದಾರೆ. ಇದು ಅವರು ಹೇಳುವಂತಹ ಮಾತು. ಬೇಕಾದರೆ ಅವರನ್ನೇ ಕೇಳಿ, ಅವರು ಇಲ್ಲ ಎಂದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು:- ಸದ್ಯಕ್ಕೆ ಈ ಮ್ಯಾಟರನ್ನು ಕ್ಲೋಜ್ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಕ್ಲೋಸ್ ಇಲ್ಲ ಸಾರ್, ಇದು ಇನ್ನೂ ಒಪನ್ ಆಗಿಲ್ಲ, ಶಾಸಕರೇ ಹೇಳುತ್ತಿದ್ದಾರೆ, The Hon'ble Member himself is telling. ಇಂತಹ ಟೆಲಿಫೋನ್ ಕಾಲ್ಸ್ ಉಪಾಧ್ಯಕ್ಷರಿಗೆ ಇರಬಹುದು, ಬಾಳಾಸಾಹೇಬ್ ವಡ್ಡರ್ ಅವರಿಗೆ ಇರಬಹುದು, ಅಥವಾ ಇನ್ನಿತರ ಯಾರೇ ಸದಸ್ಯರಿಗೆ ಇರಬಹುದು. ಇದು ಸರ್ಕಾರದ ಮತಿಯಿಂದಲೇ ಹೆದರಿಸುವಂತದೇ ಇರಬಹುದು, ಅಥವಾ ಬೇರೆ ರೀತಿಯಿಂದಲೇ ಇರಬಹುದು. ಇದು ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟುವಂತದ್ದು. ಇದು ಪಕ್ಷದ ಒಳಜಗಳದಿಂದ, ಮತ್ತು ಹತೋಟಿಯಲ್ಲಿ ತೆಗೆದುಕೊಳ್ಳಬೇಕು ಎಂದು ಈ ರೀತಿ ಕುತಂತ್ರ ನಡೆದಿದೆ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಶ್ರೀ ಚಂದ್ರಶೇಖರ ಎಂ. ಮಾಮನಿ:– ಆ ರೀತಿ ತಾವು ಅರ್ಥ ಮಾಡಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನಾನು ಆ ರೀತಿ ಅರ್ಥ ಮಾಡಿಕೊಂಡಿಲ್ಲ ಸ್ವಾಮಿ, ಆ ರೀತಿ ಅರ್ಥ ಕೊಡತಕ್ಕಂತಹ ರೀತಿಯಲ್ಲಿ ಇವತ್ತು ಉತ್ತರ ಬಂದಿದೆ.

ಅಧ್ಯಕ್ಷರು:– ಅವರು ಕ್ಲಾರಿಫೈ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅಧ್ಯಕ್ಷರೆ, ತಾವೇ ಎಲ್ಲಾ ಸದಸ್ಯರ ರಕ್ಷಣೆಗೆ ಬರಬೇಕು. This is a serious matter.

ಅಧ್ಯಕ್ಷರು:– ಖಂಡಿತ ಎಲ್ಲಾ ಸದಸ್ಯರ ರಕ್ಷಣೆ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಈ ರೀತಿ ಹೆದರಿಸಿ, ಬೆದರಿಸಿ ಸರ್ಕಾರ ಇಟ್ಟುಕೊಳ್ಳಬೇಕು ಎಂದರೆ ಹೇಗೆ?

ಅಧ್ಯಕ್ಷರು:– ಸನ್ಯಾಸ್ಯ ಪಾಟಾಳ್‌ರವರೆ, ಏಕೆ ನೀವು ಬಹಳ ಹೊತ್ತು ನಿಂತಿದ್ದೀರಿ? ಸನ್ಯಾಸ್ಯ ಶಿವಪ್ಪನವರೆ, ಪಾಟಾಳ್ ಅವರು ನಿಂತೇ ಇರುತ್ತಾರೆ, ನೀವು ನಿಂತುಕೊಳ್ಳಿ.

+ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ):– ಸನ್ಯಾಸ್ಯ ಅಧ್ಯಕ್ಷರೆ, ಈ ಚರ್ಚೆ ಮಾಡುತ್ತಿರುವಂತಹ ವಿಷಯ ಬಹಳ ಗಂಭೀರವಾಗಿರುವಂತಹದು. ಆದರೆ ಈ ಸದನದಲ್ಲಿ ಇದರ ಬಗ್ಗೆ ಚರ್ಚೆ ಬಂದಿರುವುದು ಎಷ್ಟರ ಮಟ್ಟಿಗೆ ಸೂಕ್ತ ಎಂಬ ವಿಚಾರವನ್ನು ನಾವು ದೀರ್ಘವಾಗಿ ಚಿಂತನೆ ಮಾಡಬೇಕಾಗುತ್ತದೆ. ಕಾರಣ ಆಡಳಿತ ಪಕ್ಷದವರಿಂದಲೇ ಈ ಸದನದಲ್ಲಿ ಚರ್ಚೆ ಆರಂಭ ಆದಮೇಲೆ, ಅದು ಸದನಕ್ಕೆ ಬಂದಂತಹ ವಿಷಯ, ಆದ ಕಾರಣ ತಮ್ಮ ಅನುಮತಿ ಪಡೆದು ಅದರ ಬಗ್ಗೆ ಯಾರು ಬೇಕಾದರೂ ಚರ್ಚೆ ಮಾಡಬಹುದು. ಅಧ್ಯಕ್ಷರೇ ಚರ್ಚೆ ನಡೆದಿರತಕ್ಕ ವಿಷಯವೇನೋ ತುಂಬ ಗಂಭೀರವಾದದ್ದು, ಆದರೆ, ಸದನದಲ್ಲಿ ಇದರ ಬಗ್ಗೆ ಚರ್ಚೆ ಬಂದದ್ದು ಎಷ್ಟರಮಟ್ಟಿಗೆ ಸೂಕ್ತ ಎಂಬುದನ್ನು ದೀರ್ಘವಾಗಿ ನಾವು ಚಿಂತೆ ಮಾಡಬೇಕಾಗುತ್ತದೆ. ಕಾರಣ, ಆಡಳಿತಪಕ್ಷದವರಿಂದಲೇ ರಕ್ಷಣೆಗಾಗಿ ಇವತ್ತು ಸದನದಲ್ಲಿ ಚರ್ಚೆಯಾಗಿದೆ. ಒಂದು ರೀತಿ ಸದನದಲ್ಲಿ ಚರ್ಚೆಗೆ ಬಂದ ಮೇಲೆ ಅದು ಸದನದ ಸ್ವತ್ತು, ತಮ್ಮ ಅನುಮತಿ ಪಡೆದು, ಆಡಳಿತ ಪಕ್ಷದ ಶಾಸಕರು, ಉಪಾಧ್ಯಕ್ಷರು ಇವರ ಪರಿಸ್ಥಿತಿಯೇ ಹೀಗಿರಬೇಕಾಗದರೆ ಸಾಮಾನ್ಯ ಜನ, ಶಾಸಕರ ಪರಿಸ್ಥಿತಿ ಎಲ್ಲಿಗೆ ಬರುತ್ತದೆ. ಮೊನ್ನೆ ಚುನಾವಣೆ ಸಂದರ್ಭದಲ್ಲಿ ಒಂದು ಸಣ್ಣ ಘಟನೆ ನಡೆಯಿತು, ಅದರ ಆಧಾರದ ಮೇಲೆ ಇಡೀ ಸಕಲೇಶಪುರ ತಾಲ್ಲೂಕಿನ ಎಲ್ಲಾ ಎನ್‌ಜಿಒಸ್ ಪ್ರತಿಭಟನೆ ಮಾಡಿದರು, ಅಲ್ಲಿ ಅವರ ಘೋಷಣೆ 'ಗೂಂಡಾ ರಾಜಕಾರಣಿಗಳಿಗೆ ಧಿಕ್ಕಾರ', ಗೂಂಡಾ

ಶಾಸಕರಿಗೆ ಧಿಕ್ಕಾರ ಎಂದು ಸುಮಾರು 200, 300 ಜನ ಬಲಾತ್ಕಾರವಾಗಿಯೋ, ಅವರ ಇಚ್ಛೆ ಪ್ರಕಾರವೋ ಅದು ನಡೆಯಿತು, ಅದರ ನೇತೃತ್ವ ವಹಿಸಿದ್ದವರ ಒಂದು ಔತಣಕೂಟಕ್ಕೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಹೋದರು. ಈ ರೀತಿಯಾದರೆ ಶಾಸಕರು ಕೆಲಸ ಮಾಡುವುದು ಹೇಗೆ? ಇವತ್ತು ಎಷ್ಟು ಕಷ್ಟದಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರೆ ಶಾಸಕನಾದ ತಪ್ಪಿಗೋಸ್ಕರ ಕೆಲಸ ಮಾಡುತ್ತಿದ್ದೇವೆ. ಇಂದು ಶಾಸಕನಾಗಿ ಕೆಲಸ ಮಾಡಬೇಕಾದ ಅವಶ್ಯಕತೆಯೇ ನನಗಿಲ್ಲ, ಅಷ್ಟೊಂದು ಹಿಂಸೆ. ನಮ್ಮ ಸ್ವಂತ ಶಕ್ತಿಯ ಆಧಾರದ ಮೇಲೆ ಮೇಲ್ಪಟ್ಟ ಮಂತ್ರಿಗಳ ಸಹವಾಸದಿಂದ ಆಗಬೇಕಾದ ಕೆಲವು ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದೇವೆಯೇ ವಿನಹ ನಮ್ಮ ರಕ್ಷಣೆ ನಾವು ಮಾಡಿಕೊಳ್ಳುತ್ತಿದ್ದೇವೆ, ಸರ್ಕಾರದಿಂದ ನಮಗೆ ರಕ್ಷಣೆ ಸಿಕ್ಕುತ್ತಿಲ್ಲ. ಇವತ್ತು ಆಡಳಿತ ಪಕ್ಷದವರ ಪರಿಸ್ಥಿತಿ ಈ ಮಟ್ಟಕ್ಕೆ ಇಳಿಯಬೇಕಾದರೆ ರಾಜ್ಯದಲ್ಲಿ ಆಡಳಿತ ಎಷ್ಟರಮಟ್ಟಿಗಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಅಧಿಕಾರಿಗಳು ಬೀದಿಯಲ್ಲಿ ಗೂಂಡಾ ರಾಜಕಾರಣಿಗಳಿಗೆ ಧಿಕ್ಕಾರ ಅನ್ನುವುದಾದರೆ ನಾವು ಎಲ್ಲರೂ ಗೂಂಡಾ ರಾಜಕಾರಣಿಗಳೇ? ಅಥವಾ ಯಾರು ಗೂಂಡಾರಾಜಕಾರಣಿಗಳು? ಎಂಬುದನ್ನು ಅವರು ಹೇಳಬೇಕಲ್ಲಾ? ಇದನ್ನು ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಅಧಿಕಾರಿಗಳು ಯಾವ ಮಟ್ಟಕ್ಕೆ ಹೋಗಿದ್ದಾರೆ ಅಂದರೆ ಅವರ ಮೇಲೆ ರಾಜಕಾರಣಿಗಳಿಗೆ ಹಿಡಿತ ಇಲ್ಲ. ಇವತ್ತು ಕೆಲವು ಅಧಿಕಾರಿಗಳು ನಮ್ಮ ತಾಲ್ಲೂಕಿನಲ್ಲಿ 20-25 ವರ್ಷಗಳಿಂದ ಒಂದೊಂದು ಜಾಗದಲ್ಲಿದ್ದಾರೆ. ಅವರನ್ನು ಬದಲಾಯಿಸುವಂತಹ ವ್ಯವಹಾರ ನಡೆಯಲಿಲ್ಲ. ಸಾಕಷ್ಟು ಅವ್ಯವಹಾರಗಳು. ಅವತ್ತು ಯಾರು ನೇತೃತ್ವ ವಹಿಸಿದ್ದರೋ ಅವರ ವಿರುದ್ಧ ಎಲ್ಲಾ ತರಹದ ವಿಚಾರಣೆಗಳು ನಡೆದು, ಇವತ್ತು ಡಿವಿಜನಲ್ ಕಮೀಷನರ್ ಆಫೀಸಿನಲ್ಲಿ ಒಂದು ವಿಚಾರಣೆಗೆ ಬಂದು ನಿಂತಿದೆ. ಆದರೆ, ಕ್ರಮ ತೆಗೆದುಕೊಳ್ಳುವಷ್ಟು ಶಕ್ತಿ ವಿಭಾಗಾಧಿಕಾರಿಗಳಿಗಿಲ್ಲ, ರೆವಿನ್ಯೂ ಮಂತ್ರಿಗಳಿಗಿಲ್ಲ, ನಾಳೆ ಹೊಸ ರೆವಿನ್ಯೂ ಮಂತ್ರಿ ಹತ್ತಿರ ಮಾತನಾಡುವವನಿದ್ದೇನೆ. ಈ ರೀತಿಯಾದರೆ ನಾವು ಹೇಗೆ ಕೆಲಸ ಮಾಡುವುದು? ಇದು ರಾಜ್ಯದಲ್ಲಿರುವ ಇಂದಿನ ಪರಿಸ್ಥಿತಿ. ಅವರು ಪ್ರಸ್ತಾಪಿಸಿದ್ದರಿಂದ ತಮ್ಮ ಗಮನಕ್ಕೆ ತಂದೆ. ನಿಮ್ಮದೇನು ರೀತಿ ಇದೆ, ಮೂರು ನಾಲ್ಕು ವರ್ಷ - ತೆಗಿಯಿರಿ ಒಳ್ಳೆಯವನಿದ್ದರೆ ಇನ್ನೊಂದು ಕಡೆಗೆ ಒಳ್ಳೆಯದಾಗಲಿ, ಕೆಟ್ಟವನಾದರೆ ಮತ್ತೊಂದು ಕಡೆ ಕೆಟ್ಟದಾಗಲಿ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ಅಧ್ಯಕ್ಷರು:- ಮೊದಲನೆಯದಾಗಿ, ಇದು ಚರ್ಚೆಗೆ ಅರ್ಹ ವಿಷಯವಲ್ಲ. ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಬಹುತೇಕ ಎಲ್ಲಾ ಹಂತಗಳಲ್ಲಿ ಅನಪೇಕ್ಷಿತ ವ್ಯಕ್ತಿಗಳು ನುಸುಳಿಕೊಳ್ಳುತ್ತಾರೆ. ನಾವು ಅಸಹಾಯಕರಾಗುತ್ತೇವೆ. ಇಂತಹ ಘಟನೆಗಳು ಅಲ್ಲಲ್ಲಿ ನಡೆಯುತ್ತಿರುತ್ತವೆ. ಕೆಲವು ವಿಧಾನ ಸಭೆಗಳಲ್ಲೇ ನಡೆಯುತ್ತವೆ. ಸಮಾಜದ ದೃಷ್ಟಿಯಲ್ಲಿ ಈಗಾಗಲೇ ನಾವು ಅತ್ಯಂತ ಲಘುವಾಗಿ ಕಾಣಲ್ಪಟ್ಟ ವಸ್ತುಗಳಾಗಿದ್ದೇವೆ. ಈ ರೀತಿ ಚರ್ಚೆ ಮಾಡುವುದರಿಂದ ಇನ್ನಷ್ಟು ಹೀನಾಯವಾಗಿ ಕಾಣಲ್ಪಡುತ್ತೇವೆ. ಆದ್ದರಿಂದ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಮತ್ತೆ ನಮ್ಮ ಸ್ನೇಹಿತರು ಸಹಕರಿಸುತ್ತಿರುತ್ತಾರೆ, ನಮ್ಮ ವಿಚಾರಗಳೇನಾದರೂ ಇದ್ದಲ್ಲಿ ಅದನ್ನು ಚೆನ್ನಾಗಿ ಹೈಲೈಟ್ ಮಾಡಿ ಬರೆಯುವುದರ ಮೂಲಕ. ಸ್ವಲ್ಪ ಎಚ್ಚರಿಕೆಯಿಂದ ಇದ್ದರೆ ನಮಗೂ ಒಳ್ಳೆಯದು ನಮ್ಮ ಮಕ್ಕಳಾದರೂ ಮರ್ಯಾದೆಯಿಂದ ಬದುಕಿಕೊಳ್ಳಬಹುದು. ಇದರಿಂದ ಲಾಭವೇನು? ಗೌರವವೇನು? ಎಂಬ ಪ್ರಶ್ನೆ ಬೇರೆ.

(ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ಎಂ. ಮಾಮನಿ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)